ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉನಿ : ಸುಮಪ : 2018-19 : ದಿನಾಂಕ : 03-11-2018

# ಪತ್ರಿಕಾ ಆಮಂತ್ರಣ

1. ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಮೂರನೇ ಪಡೆ ವತಿಯಿಂದ
   "ಕನ್ನಡ ರಾಜ್ಯೋತ್ಸವ – 2018"

   **ಮುಖ್ಯ ಅತಿಥಿ:**

   ಪ್ರೊ. ಎಸ್. ಜಿ. ಸಿದ್ಧರಾಮಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.

   **ಅಧ್ಯಕ್ಷತೆ:**

   ಶ್ರೀ ಭಾಸ್ಕರ್ ರಾವ್, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕೆ.ಎಸ್.ಆರ್.ಪಿ., ಬೆಂಗಳೂರು.

   ದಿನಾಂಕ: 4-11-2018 ಭಾನುವಾರ, ಸಮಯ : ಬೆಳಿಗ್ಗೆ 9-30 ಗಂಟೆಗೆ.

   ಸ್ಥಳ: ಪೊಲೀಸ್ ಪಬ್ಲಿಕ್ ಶಾಲೆ ಆವರಣ, ಮೂರನೇ ಪಡೆ, ಕೆಎಸ್ಆರ್‌ಪಿ, ಕೋರಮಂಗಲ.

2. ಕನ್ನಡ ಪುಸ್ತಕ ಪ್ರಾಧಿಕಾರ ವತಿಯಿಂದ ನಿಮ್ಮ ಮನೆಗೆ ನಮ್ಮ ಪುಸ್ತಕ

   **ಅತಿಥೇಯರು:**

   ಶ್ರೀ ಎ. ಕೃಷ್ಣಮ ನಾಯ್ಡು
   ಶ್ರೀ ಕೆ.ಎಸ್. ಕೇಶವ ರೆಡ್ಡಿ
   ಶ್ರೀ ಎಂ. ಮುನಿರಾಜು,

   **ನಮ್ಮೊಂದಿಗೆ:**

   ಶ್ರೀ ಹೆ. ಜಿ. ಸೋಮಶೇಖರ ರಾವ್,
   ಶ್ರೀ ನೈಷದಂ

   **ಪುಸ್ತಕಗಳೊಂದಿಗೆ**

   ಡಾ. ವಸುಂಧರಾ ಭೂಪತಿ, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ.

   ದಿನಾಂಕ: 04-11-2018, ಭಾನುವಾರ ಸಮಯ: ಸಂಜೆ 5-00 ಗಂಟೆಗೆ

   ಸ್ಥಳ: ನಾಡಪ್ರಭು ಕೆಂಪೇಗೌಡ ಉದ್ಯಾನವನ, ಶ್ರೀನಿವಾಸನಗರ,
   ಬೆಂಗಳೂರು – 560 050.

3. ಕರ್ನಾಟಕ ಚಲನಚಿತ್ರ ಅಕಾಡೆಮಿ ವತಿಯಿಂದಣ ಎನ್.ಎಸ್. ಶಂಕರ್ ಅವರ 'ಚಿತ್ರಕಥೆ – ಹಾಗೆಂದರೇನು?' ಪುಸ್ತಕ ಬಿಡುಗಡೆ ಸಮಾರಂಭ

**ಮುಖ್ಯ ಅತಿಥಿಗಳು**

ಶ್ರೀ ಎನ್.ಆರ್. ವಿಶುಕುಮಾರ್, ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.
ಶ್ರೀ ರಮೇಶ್ ಅರವಿಂದ, ಖ್ಯಾತ ಚಲನಚಿತ್ರ ನಟರು, ನಿರ್ದೇಶಕರು
ಶ್ರೀ ಯೋಗರಾಜ್ ಭಟ್, ಖ್ಯಾತ ಚಲನಚಿತ್ರ ನಿರ್ದೇಶಕರು

**ಅಧ್ಯಕ್ಷತೆ:**

ಡಾ. ನಾಗತಿಹಳ್ಳಿ ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ.

ದಿನಾಂಕ: 04–11–2018, ಭಾನುವಾರ ಸಮಯ: ಸಂಜೆ 5–00 ಗಂಟೆಗೆ
ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರ ಪಾರ್ಕ್ ರಸ್ತೆ, ಬೆಂಗಳೂರು.

**4. Welcome by Karnataka State Bar Council for the newly appointed Judges of the Karnataka High Court:**

**1. Hon'ble Shri Justice Ashok Golappa Nijagannavar**
**2. Hon'ble Shri Justice Hethur Puttaswamygowda Sandesh**
**3. Hon'ble Shri Justice Krishnan Natarajan**
**4. Hon'ble Shri Justice Pralhadrao Govindarao Mutalik Patil**
**5.Hon'b;e Shri Justice Appasaheb Shantappa Bellunke,**

**Date: 5-11-2018, Monday, Time: 10-00 A.M.**

**Venue: Court Hall No. 1, of the Principal Bench of the High Court of Karnataka**

5. ಕರ್ನಾಟಕ ವಿಧಾನ ಪರಿಷತ್ತಿಗೆ ನಾಮನಿರ್ದೇಶನ ಹೊಂದಿರುವ ನೂತನ ಸದಸ್ಯರುಗಳಾದ ಯು.ಬಿ. ವೆಂಕಟೇಶ್, ಪ್ರಕಾಶ್ ಕೆ. ರಾಥೋಡ್ ಹಾಗೂ ನಸೀರ್ ಅಹ್ಮದ್ ಅವರಿಂದ ಪ್ರಮಾಣ ವಚನ ಸ್ವೀಕಾರ:

ದಿನಾಂಕ: 05-11-2018, ಸೋಮವಾರ, ಸಮಯ: ಅಪರಾಹ್ನ 12-00 ಗಂಟೆಗೆ.
ಸ್ಥಳ: ಕೊಠಡಿ ಸಂಖ್ಯೆ 106, ಮೊದಲನೇ ಮಹಡಿ, ವಿಧಾನಸೌಧ, ಬೆಂಗಳೂರು.

**ಸಂಖ್ಯೆ: 1239/1339**

**ಪತ್ರಿಕಾ ಪ್ರಕಟಣೆ**

## ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಏಳು ಮಂದಿ ಹಾಗೂ ಹೆಚ್ಚುವರಿ ನ್ಯಾಯಾಧೀಶರಾಗಿ ಐವರು ಪ್ರಮಾಣ ವಚನ ಸ್ವೀಕಾರ

**ಬೆಂಗಳೂರು, ನವೆಂಬರ್ 3 ( ಕರ್ನಾಟಕ ವಾರ್ತೆ )**

ಕರ್ನಾಟಕ ಉಚ್ಚ ನ್ಯಾಯಲಯದಲ್ಲಿ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸಿದ ಕೆಂಪಯ್ಯ ಸೋಮಶೇಖರ್, ಕೊಟ್ರವ್ವ ಸೋಮಪ್ಪ ಮುದುಗಲ್, ಶ್ರೀನಿವಾಸ್ ಹರೀಶ್ ಕುಮಾರ್, ಜಾನ್ ಮೈಕೇಲ್ ಕುನ್ಹಾ, ಬಸವರಾಜ್ ಅಂದಾನಗೌಡ ಪಾಟೀಲ್, ನಂಗಲಿ ಕೃಷ್ಣರಾವ್ ಸುಧೀಂದ್ರ ರಾವ್ ಮತ್ತು ಹೊಸೂರ್ ಭುಜಂಗರಾಯ ಪ್ರಭಾಕರ್ ಶಾಸ್ತ್ರಿ ಅವರನ್ನು ಒಳಗೊಂಡಂತೆ ಏಳು ಮಂದಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಹಾಗೂ ಅಶೋಕ್ ಗೋಲಪ್ಪ ನಿಜಗಣ್ಣನವರ್, ಹೇತೂರ್ ಪುಟ್ಟಸ್ವಾಮಿಗೌಡ ಸಂದೇಶ್, ಕೃಷ್ಣನ್ ನಟರಾಜನ್, ಪ್ರಹ್ಲಾದರಾವ್ ಗೋವಿಂದರಾವ್ ಮುತಾಲಿಕ್ ಪಾಟೀಲ್ ಮತ್ತು ಅಪ್ಪಾಸಾಹೇಬ್ ಶಾಂತಪ್ಪ ಬೆಳ್ಳುಂಕೆ ಅವರೂ ಸೇರಿದಂತೆ ಐದು ಮಂದಿ ಕರ್ನಾಟಕ ಉಚ್ಚ ನ್ಯಾಯಾಲಯದ ಹೆಚ್ಚುವರಿ ನ್ಯಾಯಾಧೀಶರಾಗಿ ಇಲ್ಲಿ ಇಂದು ಪ್ರಮಾಣ ವಚನ ಸ್ವೀಕರಿಸಿದರು.

ಈ ಎಲ್ಲಾ ಮಹನೀಯರಿಗೆ ರಾಜಭವನದ ಗಾಜಿನ ಮನೆಯಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ರಾಜ್ಯಪಾಲ ವಜೂಭಾಯಿ ವಾಲ ಅವರು ನ್ಯಾಯಮೂರ್ತಿ ಪದವಿಯ ಅಧಿಕಾರ ಪ್ರಮಾಣ ವಚನವನ್ನು ಬೋಧಿಸಿದರು.

ಮುಖ್ಯಮಂತ್ರಿ ಹೆಚ್ ಡಿ ಕುಮಾರಸ್ವಾಮಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯಹಾರಗಳ ಸಚಿವ ಕೃಷ್ಣ ಬೈರೇಗೌಡ, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ದಿನೇಶ್ ಮಹೇಶ್ವರಿ, ಉಚ್ಚ ನ್ಯಾಯಾಲಯವೂ ಸೇರಿದಂತೆ ವಿವಿಧ ಅಧೀನ ನ್ಯಾಯಾಲಯಗಳಲ್ಲಿನ ನ್ಯಾಯಾಧೀಶರು ಮತ್ತು ಅಧಿಕಾರಿಗಳು, ನ್ಯಾಯಾಂಗ ಉಚ್ಚ ನ್ಯಾಯಲಯ ಮತ್ತು ಇತರೆ ನ್ಯಾಯಾಲಯಗಳಲ್ಲಿನ ಹಿರಿಯ ಹಾಗೂ ಕಿರಿಯ ವಕೀಲರು ಈ ವಿಶೇಷ ಸಮಾರಂಭಕ್ಕೆ ಸಾಕ್ಷಿಯಾಗಿದ್ದರು.

ಈ ಮುನ್ನ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ ಎಂ ವಿಜಯ ಭಾಸ್ಕರ್ ಅವರು ರಾಷ್ಟ್ರಪತಿ ಭವನದಿಂದ ಸ್ವೀಕೃತವಾದ ನೇಮಕಾತಿ ಆದೇಶವನ್ನು ವಾಚಿಸಿದರು.

*************

ಡಿ ಪಿ ಎಂ

**ಸಂಖ್ಯೆ: 1240/1340**

## ಎಂ.ಪಿ. ರವೀಂದ್ರ ನಿಧನಕ್ಕೆ ಕಂದಾಯ ಸಚಿವರ ಕಂಬನಿ

**ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)**

**ಬೆಂಗಳೂರು, ನವೆಂಬರ್ 03, 2018– ಹರಪನಹಳ್ಳಿ ಕ್ಷೇತ್ರದ ಮಾಜಿ ಶಾಸಕ ಎಂ.ಪಿ.ರವೀಂದ್ರ ಅವರ ಅಕಾಲಿಕ ನಿಧನಕ್ಕೆ ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಆರ್.ವಿ. ದೇಶಪಾಂಡೆ ಕಂಬನಿ ಮಿಡಿದಿದ್ದಾರೆ.**

**“ರವೀಂದ್ರ ಅವರ ನಿಧನವು ದುಃಖದ ಸಂಗತಿಯಾಗಿದೆ. ಅವರ ಸಾವಿನಿಂದಾಗಿ ಭರವಸೆಯ ನಾಯಕರೊಬ್ಬರನ್ನು ಕಳೆದುಕೊಂಡಂತಾಗಿದೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಮತ್ತು ಕುಟುಂಬದ ಸದಸ್ಯರಿಗೆ ಈ ನೋವನ್ನು ತಡೆದುಕೊಳ್ಳುವ ಶಕ್ತಿಯನ್ನು ನೀಡಲಿ” ಎಂದು ಸಚಿವರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.**

## ಎಸಿಬಿ ದಾಳಿ

**ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)**

ಗುಡಿಬಂಡೆ ತಾಲ್ಲೂಕು ಸೋಮೇನಹಳ್ಳಿ ಹೋಬಳಿ ಸೋಮೇಶ್ವರ ಗ್ರಾಮದ ನಿವಾಸಿಯ ತಂದೆಯವರಿಗೆ ಚಿಕ್ಕಬಳ್ಳಾಪುರದ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಬೋರ್‌ವೆಲ್‌ನ್ನು ಕೊರೆಯಿಸಿದ್ದು, ಸದರಿ ನಿಗಮದಿಂದ ಪಂಪ್, ಮೋಟರ್ ಮತ್ತು ಪೈಪ್‌ಗಳನ್ನು ವಿತರಿಸಲು ಕೋರಿರುತ್ತಾರೆ. ಶ್ರೀ.ಶ್ರೀನಿವಾಸ ಸಿ.ವಿ, ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ, ಚಿಕ್ಕಬಳ್ಳಾಪುರ ರವರು ಅರ್ಜಿದಾರರಿಗೆ ಪಂಪ್, ಮೋಟಾರ್ ಮತ್ತು ಪೈಪಗಳನ್ನು ವಿತರಿಸಲು ರೂ.10,000/– ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:02–11–2018 ರಂದು ಶ್ರೀ.ಶ್ರೀನಿವಾಸ ಸಿ.ವಿ, ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ, ಚಿಕ್ಕಬಳ್ಳಾಪುರ ರವರು ರೂ.2,000/– ಗಳ ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿ ಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

## ACB Raid

Bengaluru, November 3 (Karnataka Information)

A resident of Gudibande Taluk, Somenahalli Hobli, Someshwara Village had sought for issue of Pump, Motor & Pipes for new bore well which was sanctioned to his father under Ganga Kalyana Yojane through Chikkaballapur Maharshi Valmiki Development Corporation. Sri.Srinivasa C.V, Taluk Development Officer, Karnataka Maharshi Valmiki Development Corporation, Chikkaballapur has demanded a bribe of Rs.10,000/- to issue the same.

On 02-11-2018 the officials of ACB PS Chikkaballapur have trapped and arrested Sri.Srinivasa C.V while accepting bribe amount of Rs.2,000/- from the complainant. The bribe amount has been seized. The case is under investigation says official press release.

## Diploma Investiture ceremony

Bengaluru, November 3 (Karnataka Information)

All India Institute of Local Self Government had organized The Diploma Investiture ceremony at Bapu Hall, Gandhi Bhavan Bangalore today 02/11/2018 9:30 AM.

In the Welcome Address, Shri.Arun.N.Pujar, Regional Director, AIILSG Bangalore, expressed the close relationship between the Institute & AIILSG & Gandhi Smaraka Nidhi in Rural Development and the Health.

Sri.S.L.Patil State Information Commissioner, Karnataka information Commission, Bangalore delivered convocation address. He emphasized on Healthy lifestyle to be adapted which lead to prosperity of our country. All the medical facilities made available by the Government has to be popularized by the students who have secured Diploma today and spread the message to the Rural areas for the maximum utilization of Government schemes available to the beneficiaries.

Sri. Ashish Deosthali , Sr. Deputy Director General AIILSG Mumbai who was the Guest of Honour highlighted the achievements of the Institute

together with its vastness in the country to serve in the Health Sector. He explained the Institute involvement since 1926 and the services rendered in the field of Health & Sanitation of Local administration by the AIILSG. He advised the students to be the ambassador for Health promotional schemes.

Sir.W.P.Krishna, in his presidential address urged the student's involvement in rural Health and spread Gandhian thoughts for rural development and rural Health. He reiterated that the schemes initiated by Government of India for such as Ayush, Swach Bharath are to be implemented in letter and spirit. He especially complemented Women in particular who play vital role in good housekeeping. Dr G.R. Vijaya Kumar Principal, of the Institute proposed Vote Of Thanks.

## KNOW YOUR STARS

Bengaluru, November 3 (Karnataka Information)

A new programme entitled Ask an Astronomer is scheduled on 4th November 2018 between 5:15 pm and 6:15 pm Experts of the Planetarium will be available to answer and discuss your questions. Preferably questions can be sent by email in advance. Entry is free. Further details may be obtained from Jawaharlal Nehru Planetarium on 2237 9725 / 2226 6084 or visit website: www.taralaya.org/monthly-sky-chart-php.

## ಸಚಿವರ ಪ್ರವಾಸ

**ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)**

ಕೃಷಿ ಸಚಿವ ಎನ್.ಹೆಚ್. ಶಿವಶಂಕರರೆಡ್ಡಿ ಅವರು ನವೆಂಬರ್ 5 ರಿಂದ 6 ರವರೆಗೆ ಹಾವೇರಿ, ಗದಗ, ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.

## ಆನೇಕಲ್ ತಾಲ್ಲೂಕು – ಹುಲಿಮಂಗಲ ಗ್ರಾಮದಲ್ಲಿ ಸರ್ಕಾರಿ ಜಮೀನು ಒತ್ತುವರಿ ತೆರವು ಕುರಿತಂತೆ ಸ್ಥಳ ಪರಿವೀಕ್ಷಣೆ

ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)

ಆನೇಕಲ್ ತಾಲ್ಲೂಕು ಹುಲಿಮಂಗಲ ಗ್ರಾಮದ ಸರ್ವೆ ನಂ 350, 155, 156 ಹಾಗೂ ಇತರ ಸರ್ಕಾರಿ ಜಮೀನನ್ನು ಒತ್ತುವರಿಯಿಂದ ತೆರವು ಮಾಡುವ ಕುರಿತು ಕರ್ನಾಟಕ ವಿಧಾನಸಭೆ ಅರ್ಜಿಗಳ ಸಮಿತಿ ಇಂದು ವಿಧಾನಸೌಧದಲ್ಲಿ ಸಭೆ ಕರೆದು ನಂತರ ಸ್ಥಳ ಪರಿವೀಕ್ಷಣೆ ನಡೆಸಿತು.

ವಿಧಾನಸಭೆಯ ಉಪಸಭಾಧ್ಯಕ್ಷರಾದ ಎಂ. ಕೃಷ್ಣಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಸಮಿತಿಯ ಸದಸ್ಯರು ಹಾಗೂ ಶಾಸಕರಾದ ಸ್ವೌಮ್ಯರೆಡ್ಡಿ, ಬಿ.ಎ. ಬಸವರಾಜ್, ಉಮೇಶ್ ಈರನಗೌಡ ಕುಮರಳಿ, ಸುರೇಶ್ ಕುಮಾರ್, ಅಪ್ಪಚ್ಚು ರಂಜನ್, ಸಿ.ಎಂ. ಉದಾಸಿ, ಕೌಶಪ್ಪ ಗುರುಶಾಂತಪ್ಪ ಬಂಡಿ, ದೊಡ್ಡನಗೌಡ ಜಿ. ಪಾಟೀಲ್ ಅವರುಗಳ ಸಮಿತಿಯ ತಂಡ ಆನೇಕಲ್‌ನ ಹುಲಿಮಂಗಲ ಗ್ರಾಮದಲ್ಲಿ ಪರಿವೀಕ್ಷಣೆ ನಡೆಸಿತು.

ಸರ್ವೆ ನಂ 155 ರಲ್ಲಿ 84 ಎಕರೆ 39 ಗುಂಟೆ ಜಮೀನು ಸರ್ಕರಿ ಗೋಮಾಳದ್ದಾಗಿರುತ್ತದೆ. ಸದರಿ ಜಮೀನಿನಲ್ಲಿ ಪಹಣಿಯಂತೆ ಒಟ್ಟು 51 ಎಕರೆ 38 ಗುಂಡಿ ವಿಸ್ತೀರ್ಣ ಸಂಬಂಧಿಸಿದಂತೆ ಪ್ರಕರಣ ದಾಖಲಿರುತ್ತದೆ. ಮುಂದುವರೆದು 4 ಎಕರೆ 37 ಗುಂಟೆ ಜಮೀನಿನಲ್ಲಿ 20 ವರ್ಷಗಳಿಂದ ಅನಧಿಕೃತ ಮನೆಗಳನ್ನು ನಿರ್ಮಿಸಿಕೊಂಡು ಜನ ವಾಸವಿದ್ದಾರೆ. ಸದರಿ ಸರ್ವೆಯಲ್ಲಿ ಸರ್ಕಾರದ ಒತ್ತುವರಿ 6 ಎಕರೆ 22 ಗುಂಟೆ ಜಮೀನಿನಲ್ಲಿ ಸಾರ್ವಜನಿಕ ರಸ್ತೆಗಾಗಿ ಕಾಯ್ದಿರಿಸಲಾಗಿದೆ. ಅಲ್ಲದೆ 38 ಗುಂಟೆ ವಿಸ್ತೀರ್ಣದಲ್ಲಿ ಒತ್ತುವರಿ ತೆರವುಗೊಳಿಸಿ ಮಾರಗೊಂಡನಹಳ್ಳಿ ಸರ್ಕಾರಿ ಶಾಲೆಗೆ ಕಾಯ್ದಿರಿಸಲಾಗಿದೆ.

ಸರ್ವೆ ನಂ 156 ರಲ್ಲಿ 110 ಎಕರೆ 16 ಗುಂಟೆ ಸರ್ಕಾರಿ ಗೋಮಾಳ ಜಮೀನಾಗಿರುತ್ತದೆ. ಈ ಸರ್ವೆ ನಂ ಪಹಣಿಯಂತೆ ಒಟ್ಟು 81 ಎಕರೆ 5 ಗುಂಟೆ ವಿಸ್ತೀರ್ಣಕ್ಕೆ ಸಂಬಂದಿಸಿದಂತೆ ಪ್ರಕರಣ ವಿಚಾರಣೆ ಹಂತದಲ್ಲಿದೆ. ಇತರ 24 ಗುಂಟೆ ಜಮೀನಿನಲ್ಲಿ 20 ವರ್ಷಗಳಿಂದ ಅನಧಿಕೃತ ಮನೆಗಳಲ್ಲಿ ಜನ ವಾಸಿಸುತ್ತಿದ್ದಾರೆ. 5 ಎಕರೆ 7 ಗುಂಟೆ ಜಮೀನು ಆಶ್ರಯ ಯೋಜನೆಗೆ ಹಸ್ತಾಂತರಿಸಲಾಗಿದ್ದು, 5 ಎಕರೆ ಜಮೀನು ಮಂಜೂರಿಗೆ ರಾಜೀವ್ ಗಾಂಧಿ ವಸತಿ ಯೋಜನೆಯಡಿ ಮಂಜೂರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. 1 ಎಕರೆ 3 ಗುಂಟೆ ಜಮೀನು ಮುಸ್ಲಿಂ ಸ್ಮಶಾನಕ್ಕಾಗಿ ಕಾಯ್ದಿರಿಸಲಾಗಿದೆ. ಸದರಿ ಸರ್ವೆ ನಂಬರ್‌ನಲ್ಲಿ 1 ಎಕರೆ 4 ಗುಂಟೆ ಜಮೀನು ಕೆ.ಪಿ.ಟಿ.ಸಿ.ಎಲ್.ಗೆ ಮಂಜೂರಾಗಿರುತ್ತದೆ.

ಸರ್ವೆ ನಂ 350 ರಲ್ಲಿ ಒಟ್ಟು 22 ಎಕರೆ 10 ಗುಂಟೆ ಸರ್ಕಾರಿ ಬಂಡೆಯಾಗಿದ್ದು, ಈ ಹಿಂದೆ ಸದರಿ ಬಂಡೆಯಲ್ಲಿ ಕ್ರಷರ್‌ಗಾಗಿ ಪರವಾನಗಿ ನೀಡಿದ್ದು, ಸದರಿ ಪರವಾನಗಿ ಪೂರ್ಣಗೊಂಡಿದ್ದು, ಪ್ರಸ್ತುತ ಜಮೀನು ಸರ್ಕಾರದ ವಶದಲ್ಲಿರುತ್ತದೆ.

ಸ್ಥಳ ಪರಿವೀಕ್ಷಣೆ ನಡೆಸಿದ ಬಳಿಕ ಮಾತನಾಡಿದ ಸಮಿತಿಯ ಅಧ್ಯಕ್ಷರಾದ ಎಂ. ಕೃಷ್ಣಾರೆಡ್ಡಿ 14ನೇ ವಿಧಾನಸಭೆಯಲ್ಲಿ ಈ ಪ್ರಕರಣದನ್ವಯ ದೂರು ದಾಖಲಾಗಿದ್ದು, 15ನೇ ವಿಧಾನಸಭೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲಾಗುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಪೂರ್ಣ ದಾಖಲೆಗಳನ್ನು ಒದಗಿಸಲು ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಹಾಗೂ ಉಪ ವಿಭಾಗಾಧಿಕಾರಿಗಳಿಗೆ ಸೂಚಿಸಲಾಗಿದೆ. ಅಲ್ಲದೆ, 45 ದಿನಗಳ ಒಳಗಾಗಿ ವರದಿ ನೀಡುವಂತೆಯೂ ಕೋರಲಾಗಿದೆ. ಮುಂದುವರಿದು ತಪ್ಪಿತಸ್ಥರ ವಿರುದ್ಧ ನಿರ್ಧಾಕ್ಷಿಣ್ಯ ಕ್ರಮ ಜರುಗಿಸಲಾಗುವುದೆಂದರು.

ಈ ಕುರಿತು ಪ್ರತಿಕ್ರಿಯಿಸಿದ ಬೆಂಗಳೂರು ಜಿಲ್ಲಾದಿಕಾರಿಗಳಾದ ವಿಜಯಶಂಕರ್, ಇದರ ಸ್ಥಳ ಪರಿಶೀಲನೆ, ದಾಖಲೆ ಕಲೆಹಾಕುವಿಕೆಯ ನಂತರ ಪ್ರಕರಣಗಳನ್ನು ಹಂತ ಹಂತವಾಗಿ ಇತ್ಯರ್ಥಗೊಳಿಸಲಾಗುವುದು. ಇದಕ್ಕಾಗಿ 45 ದಿನಗಳ ಕಾಲಾವಕಾಶ ಸಹ ನೀಡಲಾಗಿದೆ. ಪಾರದರ್ಶಕತೆಯಿಂದ ವರದಿ ನೀಡಲಾಗುವುದು ಎಂದರು. ಈ ಸ್ಥಳದಲ್ಲಿ ಹಲವು ಅಧಿಕಾರಿಗಳು ಸಾರ್ವಜನಿಕರು ಹಾಜರಿದ್ದರು.

ಸಂಖ್ಯೆ:

## ಅಂತಿಮ ಆಯ್ಕೆಪಟ್ಟಿ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು 2016 ನೇ ಸಾಲಿನ ರಾಜ್ಯ ಸಿವಿಲ್ ಸೇವೆಗಳಡಿಯ ವಿವಿಧ ಇಲಾಖೆಗಳಲ್ಲಿನ 389 (ಉ.ಮೂ.ವೃ 315=74 ಹೈ.ಕ) ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಂತಿಮ ಆಯ್ಕೆ ಪಟ್ಟಿಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in.-Lists-Final selection list ರಡಿಯಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

## ಪಟಾಕಿ: ಹಲವು ಕ್ರಮಗಳನ್ನು ಪಾಲಿಸಲು ಸೂಚನೆ

ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)

ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 23–10–2018, 30–10–2018 ಮತ್ತು 31–10–2018 ರಂದು ರಿಟ್ ಪಿಟಿಶನ್ (ಸಿವಿಲ್) ನಂ. 728/2015 ಕ್ಕೆ ಸಂಬಂಧಿಸಿದಂತೆ, ತೀರ್ಪು ನೀಡಿದ್ದು, ಅದರಂತೆ ಈ ಕೆಳಕಂಡ ಸೂಚನೆಗಳನ್ನು ಸಂಬಂಧಿಸಿದ ಇಲಾಖೆಗಳು ಪಾಲಿಸುವುದು.

ವಾಯು ಮಾಲಿನ್ಯ, ಶಬ್ಬ ಮಾಲಿನ್ಯ ಮತ್ತು ಪಟಾಕಿ ಸಿಡಿಸಿದ ನಂತರ ಘನತ್ಯಾಜ್ಯ ವಸ್ತುಗಳಿಂದ ಮಾಲಿನ್ಯ ಉಂಟಾಗುವುದರಿಂದ, ಸರಣಿ ಸ್ಫೋಟಕ ಪಟಾಕಿಗಳನ್ನು (Joint firecrackers(series crackers or laris) ತಯಾರಿಸುವುದು, ಮಾರಾಟ ಮಾಡುವುದು ಮತ್ತು ಬಳಸುವುದನ್ನು ನಿಷೇದಿಸಿದೆ.

ಸ್ಫೋಟಕ ಪಟಾಕಿಗಳನ್ನು ಅಧಿಕೃತವಾಗಿ ಪರವಾನಗಿ ಪಡೆದ ಮಾರಾಟಗಾರರು ಮಾತ್ರ ಮಾರಾಟ ಮಾಡುವುದು ಮತ್ತು ಅನಧಿಕೃತವಾಗಿ ಪರವಾನಗಿ ಪಡೆದವರು ಸ್ಫೋಟಕ ಪಟಾಕಿಗಳನ್ನು ಈ ಆದೇಶಾನುಸಾರ ಮಾತ್ರ ಮಾರಾಟ ಮಾಡುವುದು.

ವಾರ್ತಾ ಮತ್ತು ಪ್ರಚಾರ ಇಲಾಖೆ ಮತ್ತು ಜಿಲ್ಲಾಡಳಿತ ಎಲ್ಲಾ ಇಲಾಖೆಗಳು ಶಾಲಾ, ಕಾಲೇಜುಗಳಲ್ಲಿ ಸಾರ್ವಜನಿಕರಲ್ಲಿ ಪಟಾಕಿ ಸಿಡಿಸುವುದರಿಂದ ಉಂಟಾಗುವ ಅಪಾಯಗಳ ಬಗ್ಗೆ ವ್ಯಾಪಕ ಪ್ರಚಾರ ಮಾಡುವುದು.

ದೀಪಾವಳಿ ಹಬ್ಬದ ಸಂಬಂಧ, ಧನತೇರಸ್ –5 ನೇ ತಾರೀಖು, ನರಕಚತುರ್ದಶಿ–6 ನೇ ತಾರೀಖು, ದೀಪಾವಳಿ ಅಮಾವಾಸ್ಯೆ–7 ನೇ ತಾರೀಖು, ಬಲಿಪಾಡ್ಯಮಿ–8ನೇ ತಾರೀಖು, ನವೆಂಬರ್ 2018 ರ ಹಬ್ಬದ ಸಮಯದಲ್ಲಿ ಪಟಾಕಿಗಳನ್ನು ರಾತ್ರಿ 8–00 ಗಂಟೆಯಿಂದ 10.00 ಗಂಟೆಯವರೆಗೆ ಮಾತ್ರ ಸಿಡಿಸುವುದು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು 14 ದಿನಗಳ ಕಾಲ ಅಂದರೆ, ದೀಪಾವಳಿ ಹಬ್ಬ ಆರಂಭವಾಗುವ 7 ದಿನಗಳ ಮೊದಲು ಮತ್ತು ದೀಪಾವಳಿ ಹಬ್ಬದ ನಂತರ 7 ದಿನಗಳು ಪಟಾಕಿ ಸಿಡಿಸುವುದರ ಬಗ್ಗೆ ಮೇಲ್ವಿಚಾರಣೆ ಮಾಡುವುದು.

ಎಲ್ಲಾ ಮಹಾನಗರ ಪಾಲಿಕೆಗಳು ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ತಾಲ್ಲೂಕು ಪಂಚಾಯಿತಿ ನಗರ ಸಭೆ, ಪರಸಭೆ, ಪಟ್ಟಣ ಪಂಚಾಯ್ತಿ, ಗ್ರಾಮ ಪಂಚಾಯ್ತಿ ವ್ಯಾಪ್ತಿಗಳಲ್ಲಿ ಪಟಾಕಿಗಳನ್ನು ಸಾಮೂಹಿಕವಾಗಿ ಸಿಡಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸುವುದು.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು Petroleum & Explosives Safety Organisation (PESO) ರವರು ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸುವುದಕ್ಕೆ ಸೂಕ್ತ ಸಹಕಾರ ನೀಡುವುದು.

ಎಲ್ಲಾ ಇಲಾಖೆಗಳು ಪ್ರಮುಖವಾಗಿ ಪೊಲೀಸ್ ಇಲಾಖೆಯು ಪಟಾಕಿ ಸಿಡಿತ ಪ್ರಕ್ರಿಯೆಯು ನಿಗದಿತ ಅವಧಿಯಲ್ಲಿ ನಡೆಯುವಂತೆ ನೋಡಿಕೊಳ್ಳುವುದು. ಕಂಡಿಕೆ(1) ಪ್ರಕಾರ ನಿಷೇದಿತ ಸ್ಪೋಟಕ ಪಟಾಕಿಗಳನ್ನು ಮಾರಾಟವನ್ನು ತಡೆಗಟ್ಟಲು ಕ್ರಮಕೈಗೊಳ್ಳುವುದು, ತಪ್ಪಿದ್ದಲ್ಲಿ ಠಾಣಾಧಿಕಾರಿಗಳನ್ನು ನ್ಯಾಯಾಲಯದ ಉಲ್ಲಂಘನೆಗಾಗಿ ತಪ್ಪಿತಸ್ಥರೆಂದು ನಿರ್ಧರಿಸಿ ಕ್ರಮಕೈಗೊಳ್ಳುವುದು ಎಂದು ಸರ್ಕಾರದ ಸುತ್ತೋಲೆ ತಿಳಿಸಿದೆ.

## ಬೆಂಗಳೂರಿನ ಕಬ್ಬನ್ ಉದ್ಯಾನವನದಲ್ಲಿ ಮಕ್ಕಳ ಹಬ್ಬ

ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)

ಮಾಜಿ ಪ್ರಧಾನ ಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರ ಜನ್ಮದಿನಾಚರಣೆ ಅಂಗವಾಗಿ ನವೆಂಬರ್ 10, 11 ಮತ್ತು 14 ರಂದು ಬೆಂಗಳೂರಿನ ಕಬ್ಬನ್‌ಪಾರ್ಕ್ ಉದ್ಯಾನವನದಲ್ಲಿ ಮಕ್ಕಳ ಹಬ್ಬವನ್ನು ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಡಾ. ಜಯಮಾಲ ಅವರು ತಿಳಿಸಿದರು.

ಇಂದು ವಿಧಾನ ಸೌಧದಲ್ಲಿ ಪತ್ರಕರ್ತರನ್ನುದ್ದೇಶಿ ಮಾತನಾಡಿದ ಸಚಿವರು ಮಕ್ಕಳ ಹಬ್ಬದ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಾನಪದ ಅಕಾಡೆಮಿಗಳ ಮೂಲಕ 30 ಜಿಲ್ಲೆಗಳ ಸರ್ಕಾರದ 49 ಬಾಲಮಂದಿರಗಳಲ್ಲಿನ ಸುಮಾರು 650 ಮಕ್ಕಳಿಗೆ ಈಗಾಗಲೇ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗಿದ್ದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಂದು ಬಾಲಭವನದ ಮಕ್ಕಳಿಗೆ ಏರ್ಪಡಿಸಲಾಗಿದೆ ಎಂದರು.

ಕಳೆದ ಮೂರು ವರ್ಷಗಳಿಂದ ಈ ಮಕ್ಕಳ ಹಬ್ಬ ಆಚರಣೆ ಮಾಡಲಾಗುತ್ತಿದ್ದು ಈ ವರ್ಷ ಅರ್ಥಪೂರ್ಣವಾಗಿ ಹಾಗೂ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದ ಸಚಿವರು ಕಳೆದ ವರ್ಷ ಮೂರು ಲಕ್ಷ ಮಕ್ಕಳು ಹಾಗೂ ಪೋಷಕರು ಈ ಮಕ್ಕಳ ಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಎಂದು ತಿಳಿಸಿದರು.

ಈ ಬಾರಿ ನಗರದಲ್ಲಿರುವ ಮಕ್ಕಳಿಗೆ ಗ್ರಾಮೀಣ ಕ್ರೀಡೆಗಳನ್ನು ಪರಿಚಯಿಸುವ ಸಂಬಂಧ ಗ್ರಾಮೀಣ ಕ್ರೀಡಾಕೂಟ ಏರ್ಪಡಿಸಲಾಗುವುದು ಎಂದ ಸಚಿವರು ಗ್ರಾಮೀಣ

ಬದುಕಿನ ವೃತ್ತಿ  ಹಾಗೂ ಕಲಾಪ್ರಕಾರಗಳ ಪ್ರದರ್ಶನಗಳನ್ನು ಏರ್ಪಡಿಸಲಾಗುವುದು ಎಂದರು ತಿಳಿಸಿದರು.

ಬಾಲ ಭವನದ ಮಕ್ಕಳು ಬರೆದಂತ ಕವಿತೆ, ಕವನಗಳನ್ನು 'ಸಂಕಲ್ಪ' ಎಂಬ ಪುಸ್ತಕದ ರೂಪದಲ್ಲಿ ಹೊರತರಲಾಗುವುದು.ಈ ಕಾರ್ಯಕ್ರಮವನ್ನು ನವೆಂಬರ್ 10 ರಂದು ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಲಿದ್ದಾರೆ. ನವೆಂಬರ್ 14 ರಂದು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಎರಡು ಪ್ರಶಸ್ತಿಗಳಾದ ಶೌರ್ಯ ಪ್ರಶಸ್ತಿ ಹಾಗೂ ಕೆಳದಿ ಚೆನ್ನಮ್ಮ ಪ್ರಶಸ್ತಿಗಳನ್ನು ರಾಜ್ಯಪಾಲ ಶ್ರೀ ವಜುಭಾಯಿ ವಾಲಾ ಮಕ್ಕಳಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದ ಸಚಿವರು ಈ ಪ್ರಶಸ್ತಿಗಳ ಆಯ್ಕೆ ಇದೆ ತಿಂಗಳ 5 ರಂದು ನಡೆಯಲಿದೆ ಎಂದರು.

ಮಕ್ಕಳ ಸುರಕ್ಷತೆಗಾಗಿ ಮುಂಜಾಗ್ರತಾ ಕ್ರಮ ಕೈಗೊಂಡಿದ್ದು, ಗ್ರಾಮೀಣ ಭಾಗದ ಮಕ್ಕಳಿಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು

ಈವರೆಗೆ ಬೆಂಗಳೂರಿನಲ್ಲಿ ಮಾತ್ರ ಮಕ್ಕಳ ಹಬ್ಬವನ್ನು ಆಚರಣೆ ಮಾಡಲಾಗುತ್ತಿತ್ತು ಈ ಬಾರಿಯಿಮದ ರಾಜ್ಯದ 4 ವಿಭಾಗೀಯ ಮಟ್ಟದಲ್ಲೂ ಮಕ್ಕಳ ಹಬ್ಬ ಆಚರಣೆ ಮಾಡಲಾಗುವುದು . ಈ ಸಂದರ್ಭಗಳಲ್ಲಿ ವೆಂಕಟಪ್ಪ ಆರ್ಟ್ ಗ್ಯಾಲರಿ, ವಿಶ್ವೇಶ್ವರಯ್ಯ ಮೂಸಿಯಂ ವೀಕ್ಷಣೆಗೆ ಮಕ್ಕಳಿಗೆ ಉಚಿತವಾಗಿ ವ್ಯವಸ್ಥೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.